**ಟಿ.ನರಸೀಪುರದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

**ಸಿ.ಸಿ. ನಂ.122/2024**

ಪಿರ್ಯಾದುದಾರರು : ಶ್ರೀಮತಿ ಮಮತ,
ಕೋಂ ಪ್ರಸನ್ನ ಕುಮಾರ್,
ಸುಮಾರು 40 ವರ್ಷ,
ವಾಸಃ ವಿದ್ಯಾನಗರ,
ಟಿ.ನರಸೀಪುರ ಟೌನ್.

-ವಿರುದ್ಧ-

ಆರೋಪಿ : ಶ್ರೀ ಜಯಕುಮಾರ್.ಎಂ,
ಬಿನ್ ಮರಿಸ್ವಾಮಿ,
ಸುಮಾರು 31 ವರ್ಷ,
ವಾಸಃ ವಿದ್ಯಾನಗರ,
ಟಿ.ನರಸೀಪುರ ಟೌನ್.

**ಭಾ ದಂ ಪ್ರ ಸಂ ಕಲಂ.313 ರ ಅಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರ:1: ಈ ಮೊಕದ್ದಮೆಯಲ್ಲಿ ವಿಚಾರಣೆ ಆಗಿರುವ ಅಭಿಯೋಜನೆ ಪರ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಉ:

ಪ್ರ:2: ಫ್ರಾಸಾ-1 ಶ್ರೀಮತಿ ಮಮತ, ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಪಿರ್ಯಾದುದಾರರಿಂದ ದಿನಾಂಕ 27.04.2023 ರಂದು ರೂ.10,00,000/- ಹಣವನ್ನು ನಿಮ್ಮ ದರದ್ದು ನಿಮಿತ್ತ ಅಂದರೆ ನಿಮ್ಮ ತುರ್ತು ಅವಶ್ಯಕತೆಗಾಗಿ ಹಾಗೂ ಮೈಸೂರಿನ ಎಂ/ಎಸ್ ಚೊಳಮಂಡಲಂ ಇನ್ವೆಸ್ಟ್‌ಮೆಂಟ್ ಮತ್ತು ಫೈನಾನ್ಸ್ ಲಿ., ನಲ್ಲಿ ಪಡೆದ ಗೃಹ ಸಾಲದ ತೀರುವಳಿಗಾಗಿ ಸಾಲವನ್ನು ಪಡೆದಿದ್ದು, ಸದರಿ ಸಾಲದ ಮೊತ್ತವನ್ನು ಪಿರ್ಯಾದುದಾರರು ಕೆನರಾ ಬ್ಯಾಂಕ್,

ಟಿ.ನರಸೀಪುರ ಶಾಖೆಯಲ್ಲಿ ತಮ್ಮ ಚಿನ್ನವನ್ನು ಅಡವಿಟ್ಟು ನಿಮಗೆ ನೀಡಿದ್ದು, ಸದರಿ ಸಾಲವನ್ನು ಮೂರು ತಿಂಗಳ ಒಳಗಾಗಿ ಮತ್ತು ಶೇಕಡ 2% ಬಡ್ಡಿ ದರದಂತೆ ಹಿಂದಿರುಗಿಸುವುದಾಗಿ ಒಪ್ಪಿಕೊಂಡಿದ್ದು, ನಿಗದಿತ ಅವಧಿಯ ನಂತರ ಸದರಿ ಸಾಲದ ಮರುಪಾವತಿಗಾಗಿ ರೂ.8,20,000/- ರಂತೆ ದಿನಾಂಕ 27.07.2023 ರ ದಿನಾಂಕವನ್ನು ನಮೂದಿಸಿದ ನಿಮ್ಮ ಬ್ಯಾಂಕ್ ಖಾತೆಯುಳ್ಳ ಫಿನ್‌ಕೇರ್ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಮೈಸೂರು ಎಸ್.ಎಫ್.ಬಿ ಶಾಖೆ, ಸರಸ್ವತಿಪುರಂ, ಮೈಸೂರಿನ ಚೆಕ್ ನಂ.000007 ನ್ನು ಮತ್ತು ರೂ.2,40,000/- ರಂತೆ ದಿನಾಂಕ 27.07.2023 ರ ದಿನಾಂಕವನ್ನು ನಮೂದಿಸಿದ ನಿಮ್ಮ ಬ್ಯಾಂಕ್ ಖಾತೆಯುಳ್ಳ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾಲೇಜ್ ರಸ್ತೆ ಶಾಖೆ, ಟಿ.ನರಸೀಪುರ ದ ಚೆಕ್ ನಂ.151878 ರ ಎರಡು ಚೆಕ್ಕುಗಳನ್ನು ಅವರಿಗೆ ನೀಡಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:3: ಫ್ರಾಸಾ-1 ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ನಿಮ್ಮ ಕೋರಿಗೆ ಮೇರೆಗೆ ಚೆಕ್ ನಂ.000007 ನ್ನು ಪಿರ್ಯಾದುದಾರರು ದಿನಾಂಕ 11.08.2023 ರಂದು ತಮ್ಮ ಬಾಬ್ತು ಎಂ/ಎಸ್ ಕೆನರಾ ಬ್ಯಾಂಕ್, ಕಾಲೇಜ್ ರಸ್ತೆ ಶಾಖೆ, ಟಿ.ನರಸೀಪುರ ಖಾತೆಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ, **'ದಯವಿಟ್ಟು ಡ್ರಾಯರ್, ಡ್ರಾಯಿ ಬ್ಯಾಂಕ್ ಅನ್ನು ಸಂಪರ್ಕಿಸಿ ಮತ್ತು ಮತ್ತೊಮ್ಮೆ ಹಾಜರುಪಡಿಸಿ (Kindly contact drawer, drawee bank and please present again)'** ಎಂಬ ಮಾಹಿತಿಯೊಂದಿಗೆ ಚೆಕ್ ಅಮಾನ್ಯಗೊಂಡು ದಿನಾಂಕ 14.08.2023 ರಂದು ಸದರಿ ಚೆಕ್ಕು ವಾಪಸ್ಸು ಬಂದಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:4: ಫ್ರಾಸಾ-1 ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ನಂತರ ದಿನಾಂಕ 02.09.2023 ರಂದು ನಿಮಗೆ ವಕೀಲರ ಮುಖಾಂತರ ನೋಟೀಸು ಕಳಿಸಿ ಸಾಲದ ಹಣವನ್ನು

ಮರುಪಾವತಿ ಮಾಡಬೇಕೆಂದು ಕೇಳಿದ್ದು, ಆದರೆ ನೀವು ಇದುವರೆಗೂ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎನ್ನುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:5:ಈ ಪ್ರಕರಣದ ವಿಚಾರವಾಗಿ ಏನಾದರೂ ಹೇಳುವುದು ಇದೆಯೆ?

ಉಃ

ಪ್ರ:6:ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರುಪಡಿಸುತ್ತೀರಾ?

ಉಃ

[ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ತೆರೆದ ನ್ಯಾಯಾಲಯದಲ್ಲಿ ಅವರಿಗೆ ಓದಿ ಹೇಳಿದ ನಂತರ ಉತ್ತರಗಳನ್ನು ಅವರು ಹೇಳಿದಂತೆ ದಾಖಲಿಸಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.]

ದಿನಾಂಕಃ 03.08.2024.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
**ಟಿ.ನರಸೀಪುರ. ****